ಲೇಖನ 04

# ಕೇರಿ ಕೇರಿಯ ಕೇರೆ ಹಾವು

ಕೇರೆ ಹಾವು (ವೈಜ್ಞಾನಿಕ ಹೆಸರು: ಟ್ಯೆಯಸ್ ಮ್ಯುಕೋಸ) ಕೊಲುಬ್ರಿಡೆ ಕುಟುಂಬಕ್ಕೆ ಸೇರಿದ ವಿಷರಹಿತ ಹಾವು. ದಕ್ಷಿಣ ಏಷ್ಯಾ ಹಾಗೂ ಆಗ್ನೇಯ ಏಷ್ಯಾದಾದ್ಯಂತ ಕಂಡುಬರುವ ಈ ಹಾವುಗಳು ಭಾರತದಾದ್ಯಂತ ಸಾಮಾನ್ಯವಾಗಿರುವ ಹಾವುಗಳು. ಉದ್ದವಾದ ಶರೀರ, ಉದ್ದ ತಲೆ ಕುತ್ತಿಗೆಗಿಂತ ಸ್ವಲ್ಪ ಅಗಲವಾಗಿ ಕಾಣುತ್ತದೆ. ಇವು ದುಂಡಗಿನ ಪಾಪೆಯುಳ್ಳ ದೊಡ್ಡ ಕಣ್ಣುಗಳನ್ನು ಹೊಂದಿದ್ದು, ಬವು ವರ್ಣಗಳಲ್ಲಿ ಕಾಣಸಿಗುತ್ತವೆ೨. ದೇಹದ ಮೇಲ್ಭಾಗ ತಿಳಿಹಳದಿ, ಆಲೀವ್, ಕಂದು, ಬೂದು ಅಥವ ಕಪ್ಪು ಬಣ್ಣಗಳಿದ್ದು ಕೆಳಬಾಗ ಬಿಳಿ, ಹಳದಿ ಬಣ್ಣಗಳಿರುತ್ತವೆ, ತಲೆಯ ಎರಡು ಪಾರ್ಶ್ವಗಳಲ್ಲಿ ಕಣ್ಣುಗಳ ಕೆಳಗೆ ಕಪ್ಪು ಗೆರೆಗಳಿದ್ದು, ದೇಹದ ಮೇಲೆ ಕಪ್ಪನೆಯ ಅಡ್ಡ ಪಟ್ಟಿಗಳಿರುತ್ತವೆ. ಮೊಟ್ಟೆಯಿಂದ ಹೊರಬಂದ ಮರಿ ಹಾವುಗಳು ೧೩-೧೯ ಇಂಚುಗಳಷ್ಟು ಉದ್ದವಿದ್ದು, ಈ ಹಾವುಗಳು ಸುಮಾರು ೯ ಅಡಿಗಳಷ್ಟು ಉದ್ದ ಬೆಳೆಯ ಬಲ್ಲವು.

ಗಂಡು ಹಾವುಗಳು ಹೆಣ್ಣು ಹಾವುಗಳಿಗಿಂತ ದೊಡ್ಡದಿರುತ್ತವೆ. ಮಾರ್ಚ್- ಸೆಪ್ಟಂಬರ್ ತಿಂಗಳಲ್ಲಿ ೮ ರಿಂದ ೨೨ ಮೊಟ್ಟೆಗಳನ್ನು ಇಡುತ್ತವೆ. ಇವುಗಳ ಮುಖ್ಯ ಆಹಾರ ಇಲಿಗಳಾಗಿದ್ದು ಹೆಚ್ಚಾಗಿ ಜನವಸತಿಗಳ ಸುತ್ತಮುತ್ತ ಸಾಮಾನ್ಯವಾಗಿ ಕಂಡುಬರುತ್ತವೆ. ತುಂಬಾ ಚುರುಕು, ಹಗಲು ಸಂಚಾರಿಗಳಾಗಿದ್ದು ಮರಗಳನ್ನು, ಒರಟು ಗೋಡೆಗಳನ್ನು ಸುಲಭವಾಗಿ ಹತ್ತಬಲ್ಲವು.



ಚಿತ್ರ ಕೃಪೆ: ಅಶೋಕ್ ಎನ್

ಕರಾವಳಿ, ಮಲೆನಾಡು, ಬಯುಲು, ಗುಡ್ಡಗಾಡು, ಹೊಲ ಇತರೆ ಕೃಷಿಭೂಮಿ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇಲಿಗಳ ಬಿಲಗಳು, ಹುತ್ತಗಳಲ್ಲಿ ಹೆಚ್ಚಾಗಿ ವಾಸಿಸುತ್ತವೆ. ಇಲಿಗಳ ಜೊತೆಗೆ ಕಪ್ಪೆ, ಹಲ್ಲಿ, ಹಕ್ಕಿ, ಬಾವುಲಿ, ಹಾವುಗಳನ್ನು ತಿನ್ನುತ್ತವೆ. ರೈತಬೆಳೆದ ಬೆಳೆಯಲ್ಲಿ ಶೇಖಡ ೨೫-೩೦% ದಂಶಕಗಳ ಪಾಲಾಗುತ್ತಿದ್ದು, ಹೆಚ್ಚಾಗಿ ದಂಶಕಗಳನ್ನು ತಿನ್ನುವುದರಿಂದ ಈ ಹಾವನ್ನು 'ರೈತನ ಮಿತ್ರ' ಎಂದು ಹೇಳುತ್ತಾರೆ. ಒಂದು ಕೇರೆ ಹಾವು ತನ್ನ ಜೀವಿತಾವಧಿಯಲ್ಲಿ ಸುಮಾರು ೧೫,೦೦೦ಕ್ಕು ಹೆಚ್ಚು ಇಲಿಗಳನ್ನು ತಿನ್ನುತ್ತವೆ.

ಕೇರೆ ಹಾವುಗಳು ಎಲ್ಲರಿಗೂ ಗೊತ್ತಿರುವ ಹಾವುಗಳಾದರೂ ಅವುಗಳನ್ನು ಅರ್ಥ ಮಾಡಿಕೊಂಡವರಿಗಿತ ಅಪಾರ್ಥ ಮಾಡಿಕೊಂಡವರೇ ಹೆಚ್ಚು. ತೊಂದರೆ ಮಾಡಿದ ತಕ್ಷಣ ಓಡಿ ಹೋಗುವುದು ಇದರ ಸ್ವಭಾವವಾಗಿದ್ದು, ಕೆಲವೊಂಮ್ಮೆ ತನ್ನ ಕುತ್ತಿಗೆ ಅಗಲಿಸಿ ನಾಗರಹಾವಿನ ಅನುಕರಣೆ ಮಾಡುತ್ತವೆ.

ಹಿಡಿದು ನೋವುಮಾಡಿದಾಗ ಕಚ್ಚುವ ಸಾಧ್ಯತೆಗಳಿದ್ದು, ಇವುಗಳ ಕಡಿತ ಪ್ರಾಣಾಪಾಯಕಾರಿ ಅಲ್ಲದೆ ಇದ್ದರು ಸ್ವಲ್ಪ ನೋವುಂಟುಮಾಡುತ್ತದೆ೨. ಇದರ ನೀಳವಾದ ಬಾಲ ಮರಗಳ ರೆಂಬೆಗಳನ್ನು ಬಲವಾಗಿ ಹಿಡಿಯಲು ವಿನ್ಯಾಸಗೊಂಡಿದ್ದು, ಕೈಯಲ್ಲಿ ಹಿಡಿದಾಗ ಸುತ್ತಿಕೊಂಡು ಬಾಲದಿಂದ ಬಲವಾಗಿ ಗಂಟು ಹಾಕಿಕೊಳ್ಳುತ್ತದೆ. ಇವುಗಳ ಬಾಲದಲ್ಲಿ ವಿಷವಿರುತ್ತದೆ, ಬಾಲದಿಂದ ಹೊಡೆಯುತ್ತವೆಯೆಂಬ ತಪ್ಪು ಕಲ್ಪನೆಗಳಿದ್ದು, ಈ ಹಾವುಗಳು ಸಂಪೂರ್ಣ ವಿಷರಹಿತವಾಗಿವೆ.

ಕೆರೆಹಾವಿಗೆ ಶತ್ರುಗಳಿಂದ ತಪ್ಪಿಸಿಕೊಳ್ಳಲು ಇನ್ನೊಂದು ವಿದಾನವಿದೆ. ಕೆಲವೊಮ್ಮೆ ತನ್ನ ವಿಸರ್ಜನಾ ಕುಳಿ(ಕ್ಲೋಯಾಕಾ)ಯಿಂದ ಬಲವಾದ ವಾಸನೆಯನ್ನು ಹೊಂದಿರುವ ತಿಳಿಹಳದಿ ಬಣ್ಣದ ದವ್ಯವೊಂದನ್ನು ವಿಸರ್ಜಿಸುತ್ತದೆ. ಇದು ಕುಳಿಯ ಬಳಿ ಇರುವ ಗ್ರಂಥಿಗಳಿದು ಉತ್ಪತಿಯಾಗುತ್ತದೆ. ಇದರ ವಾಸನೆ ಕಟುವಾಗಿದ್ದು ಶತ್ರುಗಳನ್ನು ದೂರವಿಡುತ್ತದೆ.


ಚಿತ್ರ ಕೃಪೆ: ಮನೋಜ್ ದೊಡ್ಡವಾಡ್

ಕೇರೆಹಾವುಗಳ ಬಗ್ಗೆ ಜನಸಾಮಾನ್ಯರಲ್ಲಿ ಇರುವ ಇನ್ನೊಂದು ತಪ್ಪು ತಿಳುವಳಿಕೆಯ ವಿಷಯವೆಂದರೆ ಅವುಗಳ ಮಿಲನ ಹಾಗು ಕದನಗಳ ಗುರುತಿಸುವಲ್ಲಿ ಗೊಂದಲ. ಸಾಮಾನ್ಯವಾಗಿ ಎರಡು ಕೇರೆ ಹಾವುಗಳು ಸುತ್ತಿಕೊಂಡು ಆಡುತ್ತಿರುವ ದೃಶ್ಯಗಳನ್ನು ನೋಡಿರುತ್ತೇವೆ, ಅದು ಅವುಗಳ ಮಿಲನ ಕ್ರಿಯೆಯಂದು ತಪ್ಪಾಗಿ ಭಾವಿಸುತ್ತಾರೆ. ಮಿಲನಕಾಲದಲ್ಲಿ ಒಂದು ಹೆಣ್ಣು ಹಾವು ತನ್ನ ದೇಹದಿಂದ ಫೆರಮೋನ್ನನು (ಸ್ವಜಾತಿ ಸಂವಾದಕ್ಕೆ ಬಳಸುವ ಒಂದು ಬಗೆಯ ರಾಸಾಯನಿಕ ದ್ರವ್ಯ) ಹೊರಹಾಕುತ್ತದೆ. ಅದನ್ನು ಗಂಡು ಹಾವುಗಳು ಪರಿಸರದಲ್ಲಿನ ರಾಸಾಯನ ಗ್ರಹಿಸಬಲ್ಲ ತಮ್ಮ ಸೀಳುನಾಲಿಗೆಯ ಹಾಗು ತಲೆಯೊಳಗಿನ 'ಜಾಕೋಬ್ಸನ್' ಅಂಗದ ಸಾಹಾಯದಿಂದ ಗ್ರಹಿಸಿ ಬಂದು ಮಿಲನಕ್ರಿಯೆ ನೆಡೆಸುತ್ತವೆ. ಕೆಲವೊಮ್ಮೆ ಒಂದಕ್ಕಿತ ಹೆಚ್ಚು ಗಂಡು ಕೇರೆ ಹಾವುಗಳು ಬಂದರೆ ಹೆಣ್ಣು ಹಾವಿಗಾಗಿ ತಮ್ಮ ತಮ್ಮಲ್ಲೆ ಒಂದಕ್ಕೊದು ಸುತ್ತಿಕೊಂಡು ಕದನವಾಡುತ್ತವೆ. ಕದನದಲ್ಲಿ ಗೆದ್ದ ಹಾವು ಹೆಣ್ಣು ಹಾವಿನ ಜೊತೆ ಸೇರುತ್ತದೆ. ನಾಗರಹಾವು ಕೇರೆಹಾವಿನ ಜೊತೆ ಮಿಲನವಾಗುತ್ತವೆ ಎಂಬ ಸುಳ್ಳು ವಿಚಾರವು ಜನರಲ್ಲಿದೆ. ಆದರೆ ಹಾವುಗಳು ಕೇವಲ ತಮ್ಮ ಪ್ರಭೇದದ ಹಾವುಗಳೊಂದಿಗೆ ಮಾತ್ರ ಸೇರುತ್ತವೆ.

ಈ ರೀತಿಯಾದ ಗಂಡು ಹಾವುಗಳ ಕದನವು ತಮ್ಮ ಪ್ರದೇಶಗಳಿಗಾಗಿಯೂ ನಡೆಯುತ್ತವೆ. ಒಂದು ಕೇರೆಹಾವಿನ ಪ್ರದೇಶಕ್ಕೆ ಮತ್ತೊಂದು ಹೊಸ ಕೇರೆಹಾವು ಬಂದರೆ ಅವೆರಡದ ನಡುವೆ ಈ ಕದನವು ನಡೆಯುತ್ತದೆ.

ಒಂದು ಹಾವು ಇನ್ನೊಂದು ಹಾವಿನ ತಲೆಯನ್ನು ನೆಲಕ್ಕೆ ತಾಗಿಸಿ ಸೋಲಿಸುವವರೆಗೂ ಈ ಕದನ ನಡೆಯುತ್ತಿರುತ್ತದೆ. ಸೋತ ಹಾವು ಆ ಪ್ರದೇಶ ಬಿಟ್ಟು ತೆರಳುತ್ತದೆ, ಗೆದ್ದ ಹಾವು ಆ ಪ್ರದೇಶದಲ್ಲೆ ವಾಸಿಸುತ್ತದೆ. ಇಂತಹ ಒಂದು ಪಧತಿಯಿಂದು ಪ್ರತ್ಯೇಕವಾದ ಹಾವುಗಳಿಗೆ ಪ್ರತ್ಯೇಕವಾದ ಪ್ರದೇಶ ಹಾಗು ಅಲ್ಲಿನ ಆಹಾರ ಸೀಮಿತವಾಗಿರುತ್ತವೆ. ಈ ಕ್ರಿಯೆ ಕೇರೆಹಾವಿನ ಜೊತೆಗೆ ಇತರ ಕೆಲವು ಪ್ರಭೇದದ ಹಾವುಗಳಲ್ಲು ಸಾಮಾನ್ಯವಾಗಿದ್ದು ಇದನ್ನು ನೋಡುವುದರಿಂದ ಯಾವುದೆ ತರಹದ ಕೆಡಕುಗಳು ಸಂಭವಿಸುವುದಿಲ್ಲ. ಅವುಗಳನ್ನು ಕೆಣಕದೆ ಅವುಗಳ ಪಾಡಿಗೆ ಬಿಡುವುದು ಉತ್ತಮ.

ಕೇರೆಹಾವಿನ ವಿಚಾರದಲ್ಲಿದ್ದಂತೆ ಇತರ ಹಾವುಗಳ ಬಗ್ಗೆಯೂ ಜನರಲ್ಲಿ ಹೆಚ್ಚಾದ ಮಿಥ್ಯಗಳಿದ್ದು ಹಾವುಗಳ ಬಗೆಗಿನ ಅಜ್ಞಾನ ಹಾವುಗಳ ಸಂತತಿಗೆ ಮಾರಕವಾಗುತ್ತಿದೆ. ಭಾರತದಲ್ಲಿ ಕಂಡುಬರುವ ಹಾವುಗಳಲ್ಲಿ ಬಹುತೇಕ ಹಾವು ವಿಷರಹಿತ ಹಾವುಗಳಾಗಿದ್ದು ಮಾನವರಿಗೆ ಯಾವುದೆ ಅಪಾಯವನ್ನು ಉಂಟುಮಾಡುವುದಿಲ್ಲ.




**ಪರೀಕ್ಷಿತ್**
ಎಂಎಸ್ಸಿ ವಿದ್ಯಾರ್ಥಿ,
ವನ್ಯಜೀವಿ ಮತ್ತು ನಿರ್ವಹಣೆ ವಿಭಾಗ, ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ, ಶಿವಮೊಗ್ಗ